ಇ) 300 ಶುಶ್ರೂಷಾ ಹುದ್ದೆಗಳು ಖಾಲಿ ಇರುತ್ತವೆ.

ಈ) ಶುಶ್ರೂಷರ ಹುದ್ದೆಗಳನ್ನು ಭರ್ತಿಮಾಡುವಾಗ ರಾಜ್ಯದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಜೆ.ಸಿ. ನಗರ ಮಥದಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಗಳ ಅಭಿವೃದ್ಧಿ.

2242 - ಶ್ರೀ ಆರ್. ಕೃಷ್ಣಪ್ಪ (ಜಯಮಹಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯಮಹಲ್ ವಿಧಾನಸಭೆಯ ಮತಕ್ಷೇತ್ರಕ್ಕೆ ಸೇರಿದ ಜೆ.ಸಿ ನಗರ, ಮರದಹಳ್ಳಿ ಹಾಗೂ ನ್ಯೂ ಸವಾರ್ ಲೈನಗಳಲ್ಲಿ ಒಟ್ಟು ಎಷ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ?

ಆ) ಈ ಶಾಲೆಗಳಲ್ಲಿ ಹಲವಾರು ನ್ಯೂನತೆಗಳಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಶಾಲೆಗಳನ್ನು ಅಭಿವೃದ್ಧಿಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) .

ಅ) 24

ಆ) 1. ಸರ್ಕಾರಿ ಕನ್ನಡ ಮಾ. ಪ್ರಾ. ಶಾಲೆ ಗಂಗಾನಗರ.

2. ಸರ್ಕಾರಿ ಕನ್ನಡ ಮಾ. ಪ್ರಾ. ಶಾಲೆ ಮುನಿರೆಡ್ಡಿಪಾಳ್ಯ

3. ಸರ್ಕಾರಿ ಉರ್ದು ಮಾ. ಪ್ರಾ. ಶಾಲೆ ಮುನಿರೆಡ್ಡಿಪಾಳ್ಯ

ಈ ಮೂರು ಶಾಲೆಗಳಿಗೆ ಸ್ವಂತ ಕಟ್ಟಡ ಹಾಗೂ ನಿವೇಶನ ಲಭ್ಯವಿಲ್ಲದೆ ಬೆಂಗಳೂರು ಮಹಾನಗರಪಾಲಿಕೆ ಕಟ್ಟಡದಲ್ಲಿ ನಡೆಯುತ್ತಿದೆ.

4. ಸರ್ಕಾರಿ ಕನ್ನಡ ಮಾ. ಪ್ರಾ. ಶಾಲೆ ನ್ಯೂಸವಾರ್ ಲೈನ್ ಈ ಶಾಲೆಯು ಸ್ವಂತ ಕಟ್ಟಡ ಮಿಲ್ಟ್ರಿ ಇಲಾಖೆಗೆ ಸೇರಿದ ಜಾಗದಲ್ಲಿದ್ದು ಈ ನಿವೇಶನವನ್ನು ಶಿಕ್ಷಣ ಇಲಾಖೆಗೆ ಹಸ್ತಾಂತರಿಸಿಕೊಳ್ಳಲು ಪತ್ರ ವ್ಯವಹಾರ ನಡೆಯುತ್ತಿರುತ್ತದೆ.

ಇ) ಮೇಲ್ಕಂಡ ಶಾಲೆಗಳಿಗೆ ಕಟ್ಟಡ ನಿರ್ಮಿಸಲು ನಿವೇಶನ ಪಡೆಯಲು ಬೆಂಗಳೂರು ಮಹಾನಗರ ಪಾಲಿಕೆಯನ್ನು ಕೋರಿದೆ.

ಗುಂಡ್ಲುಪೇಟೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಿಬ್ಬಂದಿಯ ನೇಮಕ.

2243 - ಶ್ರೀ ಹೆಚ್. ಎನ್. ಮಹದೇವ್. ಪ್ರಸಾದ್ (ಗುಂಡ್ಲಪೇಟೆ) : ಮಾನ್ಯ ಆರೋಗ್ಯ, ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸವರೆ?

ಅ) ಗುಂಡ್ಲುಪೇಟೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ತಜ್ಞ ವೈದ್ಯರುಗಳು ಮತ್ತು ಇತರ ನೌಕರರ ಸ್ಥಾನಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?